

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಪ್ರಾಣಿಗಳಿಗಿಂತ ಮನುಷ್ಯ ಶ್ರೇಷ್ಠನೇ?

ಮನುಷ್ಯ ಬುದ್ಧಿಜೀವಿ, ಅದೇ ಕಾರಣದಿಂದ ಅವನು ಸೃಷ್ಟಿಯ ಕಿರೀಟವೆನಿಸಿದ್ದಾನೆ. ಅವನಂತೆ ಚಿಂತನಾಶೀಲ ಪ್ರವೃತ್ತಿ ಬೇರೆಯ ಪ್ರಾಣಿಗಳಿಗಿಲ್ಲ. ಜೀವ-ಜಗತ್ತು, ಹುಟ್ಟು-ಸಾವು, ಹುಟ್ಟಿಗೆ ಮುಂಚೆ, ಸಾವಿನ ಆಚೆ ಎಂಬುದರ ಬಗೆಗೆ ಅವೆಂದಿಗೂ ಮನುಷ್ಯನಂತೆ ಯೋಚಿಸಲಾರವು. ಈ ವಿಷಯವಾಗಿ ಎಲ್ಲರಿಗೂ ಗೊತ್ತಿರುವ ಪ್ರಸಿದ್ಧ ಸಂಸ್ಕೃತ ಸುಭಾಷಿತ:

> **ಆಹಾರ-ನಿದ್ರಾ-ಭಯ-ಮೈಥುನಂ ಚ**
> **ಸಮಾನಮೇತತ್ ಪಶುಭಿರ್ನರಾಣಾಂ ।**
> **ಏಕೋ ವಿವೇಕೋ ಹ್ಯಧಿಕೋ ಮನುಷ್ಯೇ**
> **ತೇನೈವ ಹೀನಾಃ ಪಶುಭಿಃ ಸಮಾನಾಃ ॥**

ಉಣ್ಣುವುದು, ನಿದ್ರೆ ಮಾಡುವುದು, ಭಯಪಡುವುದು, ಗಂಡು-ಹೆಣ್ಣು ಕೂಡುವುದು ಇತ್ಯಾದಿ ಅನೇಕ ಶಾರೀರಿಕ ಕ್ರಿಯೆಗಳಲ್ಲಿ ಮನುಷ್ಯನಿಗೂ ಮತ್ತು ಪ್ರಾಣಿಗಳಿಗೂ ಸಾಮ್ಯತೆ ಇದೆ. ಆದರೆ ಹೀಗೆ ಹೋಲಿಸುವಾಗ ಪ್ರಾಣಿಗಳಲ್ಲಿಲ್ಲದ ವಿವೇಕ ಅಂದರೆ ಕಾರ್ಯಾಕಾರ್ಯ ಪ್ರಜ್ಞೆ ಮನುಷ್ಯನಲ್ಲಿ ಅಧಿಕವಾಗಿರುವುದು ಕಂಡುಬರುತ್ತದೆ. ಅಂತಹ ವಿವೇಕ ಇಲ್ಲದೇ ಇರುವ ಮನುಷ್ಯ ಪ್ರಾಣಿಗಳಿಗೆ ಸಮಾನನಾಗುತ್ತಾನೆ ಎನ್ನುತ್ತದೆ ಈ ಸುಭಾಷಿತ. ಅಂದಮಾತ್ರಕ್ಕೆ ಮನುಷ್ಯನನ್ನು ಶ್ರೇಷ್ಠ, ಪ್ರಾಣಿಗಳನ್ನು ಕನಿಷ್ಠ ಎಂದು ಭಾವಿಸುವುದು ಸರಿಯೇ?

ನೈತಿಕ ಮೌಲ್ಯಗಳೇ ಪ್ರಾಣಿಗಳಿಗಿಲ್ಲ ಎಂಬ ಧ್ವನಿ ಈ ಮೇಲಿನ ಶ್ಲೋಕದಲ್ಲಿ ಅಡಗಿದೆ. ಆದರೆ ಕಳ್ಳತನ ಮಾಡಬಾರದು, ಸುಳ್ಳು ಹೇಳಬಾರದು, ಕೊಲ್ಲಬಾರದು, ಜಂಭ ಪಡಬಾರದು, ಪರಧನಕ್ಕೆ ಆಸೆ ಮಾಡಬಾರದು, ಹಿಂಸೆ ಮಾಡಬಾರದು, ಸಂಗ್ರಹ ಬುದ್ಧಿ ಇರಬಾರದು, ಹಂಚಿ ಉಣ್ಣಬೇಕು, ಹೀಗೆ ನೈತಿಕ ಮೌಲ್ಯಗಳನ್ನು ಪಟ್ಟಿಮಾಡುತ್ತಾ ಹೋದರೆ ಅವುಗಳನ್ನು ಬಹುತೇಕ ಪಾಲಿಸುವವು ಪ್ರಾಣಿಗಳೇ ಹೊರತು ಮನುಷ್ಯರಲ್ಲ. ಮನುಷ್ಯ ಬುದ್ಧಿವಂತ, ನಿಜ. ಆದರೆ ಅವನಲ್ಲಿ ಒಳ್ಳೆಯ ಬುದ್ಧಿಯೂ ಇದೆ, ಕೆಟ್ಟಬುದ್ಧಿಯೂ ಇದೆ. ಮನುಷ್ಯನನ್ನು ಪ್ರಾಣಿಗಳಿಗೆ ಹೋಲಿಸಿ 'ಕತ್ತೆ, ಕೋಣ, ಗೂಬೆ, ನಾಯಿ, ನರಿ' ಎಂದು ಬಯ್ಯುತ್ತಾರೆಯೇ ಹೊರತು ಪ್ರಾಣಿಗಳನ್ನು ಮನುಷ್ಯನಿಗೆ ಹೋಲಿಸಿ ಹೊಡೆಯುವುದಿಲ್ಲ. ಪ್ರಾಣಿಗಳ ಚಿಂತನೆ ಏನಿದ್ದರೂ ಹಸಿದ ಹೊಟ್ಟೆ ಮತ್ತು ಅದನ್ನು ತುಂಬುವ ಬಗೆ ಅಷ್ಟೇ. ಅದೂ ಸಹ ಆಯಾಯ ಕ್ಷಣದ ಹಸಿವು ಮಾತ್ರ. ಸಂಜೆಯ ಆಹಾರದ ಚಿಂತೆ ಅವುಗಳಿಗೆ ಇರುವುದಿಲ್ಲ. ಇರುವೆ, ಜೇನುಗಳಂಥ ಜೀವಜಂತುಗಳು ಕೆಲವೇ ಕೆಲವು ಮಾತ್ರ 'ನಾಳೆ'ಗೆಂದು ಕೂಡಿಡುತ್ತವೆ; ಹಾಗೆ ಮಾಡುವುದು ಅವುಗಳಿಗೆ ಅನಿವಾರ್ಯವೂ ಆಗಿರುವುದರಿಂದ ಸೃಷ್ಟಿಯ ನಿಯಮವೇ ಹಾಗಿರುವಂತೆ ತೋರುತ್ತದೆ. ಇಂಥ ಕೆಲವೇ ಕೆಲವನ್ನು ಹೊರತುಪಡಿಸಿ ಬಹುತೇಕ ಪ್ರಾಣಿಗಳು ನಾಳೆಗೆಂದು ತೆಗೆದಿರಿಸದ ಅಸಂಗ್ರಹದ ಬದುಕನ್ನು ಬಾಳುತ್ತವೆ. "ಹೊನ್ನಿನೊಳಗೊಂದೊರೆಯ, ವಸ್ತ್ರದೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ! ನಿಮ್ಮ ಪುರಾತನರಾಣೆ!" ಎನ್ನುವ ಬಸವಣ್ಣನವರ ತತ್ವವನ್ನು ಅಕ್ಷರಶಃ ಪ್ರಾಣಿಗಳು ಪಾಲಿಸುತ್ತಿವೆಯೇ ಹೊರತು 'ಬಸವಜಯಂತಿ'ಯನ್ನು ಅದ್ದೂರಿಯಾಗಿ ಆಚರಿಸುವ ಜನರಲ್ಲ. ಪ್ರಾಣಿಗಳಿಗೆ ಹೊನ್ನಿನ ಮೋಹವಾಗಲೀ, ಉಡುಗೆತೊಡುಗೆಗಳ ವ್ಯಾಮೋಹವಾಗಲೀ ಇಲ್ಲ.

ಯಾವ ಪ್ರಾಣಿಯೂ ಹೊಟ್ಟೆ ತುಂಬಿದ ನಂತರ ಉಳಿದದ್ದನ್ನು ನಾಳೆಗೆ ಇರಲಿ ಎಂದು 'ಫ್ರಿಜ್' ನಲ್ಲಿ ಕಾಯ್ದಿರಿಸಲಾರದು! ಮಕ್ಕಳಿಗೆ ಮರಿಗಳಿಗೆ ಎಂದು ತಲೆಮಾರುಗಳವರೆಗೆ ಕುಳಿತು ಉಣ್ಣುವಷ್ಟು ಆಸ್ತಿಯನ್ನು ಮಾಡಿ ಇಡಲಾರದು; ಹೊಟ್ಟೆ ತುಂಬಿಸಿಕೊಳುವಾಗ ತನ್ನ ಆಹಾರವನ್ನು ಬೇಟೆಯಾಡಲು ವಂಚನೆ, ಮೋಸ, ತಂತ್ರಗಾರಿಕೆಗಳನ್ನು ಅನುಸರಿಸಿದರೂ ಮನುಷ್ಯನ ಹಾಗೆ ದ್ವೇಷವನ್ನು ವಂಶಪಾರಂಪರ್ಯವಾಗಿ ಮುಂದುವರಿಸಿಕೊಂಡು ಹೋಗುವ ಕೆಟ್ಟ ಪ್ರವೃತ್ತಿ ಅವುಗಳಿಗಿಲ್ಲ. 'ಹಾವಿನ ದ್ವೇಷ ಹನ್ನೆರಡು ವರುಷ' ಎಂಬುದು ಮನುಷ್ಯನ ಕಲ್ಪನೆ ಅಷ್ಟೆ! ಯಾವ ಹಾವೂ ಮನುಷ್ಯನಂತೆ ವರ್ಷಾನುಗಟ್ಟಲೆ ದ್ವೇಷವನ್ನು ಸಾಧಿಸುವುದಿಲ್ಲ. ಪ್ರಾಣಿಗಳು ತಮ್ಮ ಮತ್ತು ತಮ್ಮ ಕರುಳಕುಡಿಯ ರಕ್ಷಣೆಗಾಗಿ ಹೋರಾಟ ಮಾಡಿ ಹಿಂಸೆಗೆ ಇಳಿಯಬಹುದೇ ಹೊರತು, ಮನುಷ್ಯನಂತೆ ಹಿಂಸೆಯನ್ನೇ ಉಸಿರಾಡುವ ಗೀಳು ಅವಕ್ಕಿಲ್ಲ. ಮನುಷ್ಯನ ಹಾಗೆ ತನ್ನಲ್ಲಿರುವ ದ್ವೇಷವನ್ನು ಮುಂದಿನ ಪೀಳಿಗೆಯ ತಲೆಯಲ್ಲಿ ಪ್ರಾಣಿಗಳು ತುಂಬಿ ವಂಶಪಾರಂಪರ್ಯವಾಗಿ ಅದು ಮುಂದುವರಿಯುವಂತೆ ಮಾಡುವುದಿಲ್ಲ.

ಪ್ರಾಣಿಗಳೇನಾದರೂ ಮನುಷ್ಯನಂತೆ ದ್ವೇಷ, ಹಗೆತನಗಳನ್ನು ಇಟ್ಟುಕೊಂಡಿದ್ದರೆ ಈ ಭೂಮಿಯ ಮೇಲೆ ಮನುಷ್ಯ ಸಂತತಿಯೇ ಇರುತ್ತಿರಲಿಲ್ಲ! ಸ್ವಾರ್ಥಿ ಮನುಷ್ಯನಿಂದ ತಮಗಾದ ಅನ್ಯಾಯವನ್ನು ಪ್ರತಿಭಟಿಸಲು, ಅವನ ವಿರುದ್ಧ ಬಂಡೇಳಲು ಯಾವ ಸುಪ್ರೀಂ ಕೋರ್ಟಿನ ತೀರ್ಪಿಗೂ ಅವು ಕಾಯುತ್ತಿರಲಿಲ್ಲ. ಕಾಡುಮೇಡುಗಳನ್ನು ಕಡಿದು ತಮಗೆ ಜೀವಿಸಲು ಅವಕಾಶ ಮಾಡಿಕೊಡದ ಕಾರಣ ಆನೆಗಳು ಮತ್ತು ಚಿರತೆಗಳು ನಾಡಿಗೆ ನುಗ್ಗುತ್ತಿವೆಯೇ ಹೊರತು ಸ್ವಾರ್ಥದ ಸಂಚಿನಿಂದಲ್ಲ. ಹಾಗೇನಾದರೂ ಮಾಡಿದ್ದರೆ ಪ್ರಾಣಿ ಸಂಕುಲದ ಮೇಲೆ ಮಾಡಿದ ಹಿಂಸೆಗೆ ಸೇಡನ್ನು ತೀರಿಸಿಕೊಳ್ಳಲು ಕೈಗೆ ಸಿಕ್ಕ ಪ್ರತಿಯೊಬ್ಬ ಮನುಷ್ಯನನ್ನು ಪ್ರಾಣಿಗಳು ಒಂದು ಸಾರಿ ಅಲ್ಲ, ನೂರಾರು ಸಾರಿ ಕೊಲ್ಲಬೇಕಾಗಿತ್ತು.

- 2 -

ಪ್ರತಿಯೊಂದು ಜೀವವೂ ಮತ್ಯುವಿನಿಂದ ಅಮರತ್ವದ ಕಡೆಗೆ ಪ್ರಯಾಣ ಕೈಗೊಂಡಿರುತ್ತದೆ. ಅನೇಕ ಭವಗಳಲ್ಲಿ ತೊಳಲಿ, ಬೆಂದು, ಬಸವಳಿದು, ತನ್ನ ಸುಕೃತದಿಂದ ಪರಮಾತ್ಮನಿಗೆ ಹತ್ತಿರವಾಗುತ್ತಾ ಸಾಗುತ್ತದೆ. ಮನುಷ್ಯ ಜನ್ಮ ದೊರೆಯುವುದು ದುರ್ಲಭ. ಅದು ದೊರೆಯಿತೆಂದರೆ ಜೀವವು ಪರಮಾತ್ಮನನ್ನು ತಲುಪಲು ಇನ್ನು ಒಂದೇ ಒಂದು ಹೆಜ್ಜೆ ಮಾತ್ರ ಉಳಿದಿರುತ್ತದೆ, ಅದನ್ನು ಕ್ರಮಿಸಿದರಷ್ಟೇ ಸಾಕು ಭವಬಂಧನದಿಂದ ಮುಕ್ತಿ, ಜೀವಿಯ ತೊಳಲಾಟಕ್ಕೆ ಕೊನೆ, ಆತ್ಮ ಸತ್-ಚಿತ್-ಆನಂದ ಸ್ವರೂಪನಾದ ಪರಮಾತ್ಮನ ರೂಪವನ್ನೇ ಪಡೆಯುತ್ತದೆ - ಇವು ಭಾರತೀಯರ ಸಾಂಪ್ರದಾಯಿಕ ನಂಬಿಕೆಗಳು

'ಮಾನವ ಜನ್ಮ ದೊಡ್ಡದು ಇದ ಹಾನಿಮಾಡಿಕೊಳ್ಳಲು ಬೇಡಿ, ಹುಚ್ಚಪ್ಪಗಳಿರಾ' ಎನ್ನುತ್ತಾರೆ ಪುರಂದರ ದಾಸರು. ಇದು ವಿವೇಕವುಳ್ಳವನಾಗಿಯೂ ಅವಿವೇಕಿಯಂತೆ ವರ್ತಿಸುತ್ತಿರುವ ಮನುಷ್ಯನನ್ನು ಎಚ್ಚರಿಸಲು ಹೇಳಿದ ಮಾತೇ ಹೊರತು ಪ್ರಾಣಿಗಳನ್ನು ನಿಂದಿಸಲು ಅಲ್ಲ. ಸರ್ವ ಜೀವಿಗಳಲ್ಲಿ ಮನುಷ್ಯನೇ ಶ್ರೇಷ್ಠ ಎಂಬುದು ಮನುಷ್ಯನೇ ಮಾಡಿಕೊಂಡ ನಾಣ್ಣುಡಿ ಅಷ್ಟೇ. ಪ್ರಾಣಿಗಳು ಪ್ರಾಯಶಃ ಇದನ್ನು ಒಪ್ಪಲಾರವು. ಮನುಷ್ಯ ನಿಜವಾಗಿಯೂ ಶ್ರೇಷ್ಠ ನಡವಳಿಕೆಯನ್ನು ಉಳ್ಳವನಾಗಿದ್ದರೆ ಜಗತ್ತಿನಲ್ಲಿ ಇಂದು ಕಂಡುಬರುವ ಸಮಸ್ಯೆಗಳಿಗೆ ಸ್ಥಳವಿರುತ್ತಿರಲಿಲ್ಲ. ಎಷ್ಟೋ ವಿಚಾರಗಳಲ್ಲಿ ಮನುಷ್ಯನಿಗಿಂತ ಪ್ರಾಣಿಗಳು ಹೆಚ್ಚು ಧರ್ಮಬದ್ಧವಾದ ಜೀವನ ನಡೆಸುತ್ತವೆ. ಪ್ರಾಣಿಗಳಿಗೆ ವಿಚಾರ ಮಾಡುವ ಶಕ್ತಿ ಇಲ್ಲದಿದ್ದರೂ ಕೃತ್ರಿಮತೆ ಇಲ್ಲ. ಮನುಷ್ಯನಿಗೆ ನೈತಿಕ ಪ್ರಜ್ಞೆ ಇರಬಹುದು, ಇದ್ದು ಪ್ರಯೋಜನವೇನು? ಮನುಷ್ಯನಲ್ಲಿರುವ ಬುದ್ಧಿಶಕ್ತಿ ಬಹಳ ಸಲ ಅವನ ಸ್ವಾರ್ಥವನ್ನು ತಣಿಸಲಷ್ಟೇ ದುರುಪಯೋಗವಾಗುತ್ತದೆ. ಪ್ರಜ್ಞೆಗೆ ಅನುಗುಣವಾದ ನಡವಳಿಕೆ ಮನುಷ್ಯನಲ್ಲಿಲ್ಲ, ಅರಿವು ಆಚಾರದಲ್ಲಿ ಸಮನ್ವಯಗೊಳ್ಳದ ದೊಡ್ಡ ಕಂದಕವನ್ನು ಮನುಷ್ಯನಲ್ಲಿ ಕಾಣಬಹುದು. ನಡವಳಿಕೆ ಮುಖ್ಯವೇ ಹೊರತು ಬರೀ ಪ್ರಜ್ಞೆ ಅಲ್ಲ. ಆದಕಾರಣವೇ ಶರಣರು ಪ್ರಶ್ನೆ ಮಾಡಿದ್ದು:

**"ಅಂತರಂಗದಲ್ಲಿ ಅರಿವಾದರೇನು? ಬಹಿರಂಗದಲ್ಲಿ ಕ್ರೀಯಿಲ್ಲದನ್ನಕ್ಕ!"**

**8.11.2012**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑